**ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎಸ್ ವಕೀಲರಿಂದ**

ದಾವ ಸ್ವತ್ತಿನ ಚಕ್ಕುಬಂದಿಯು ಪೂರ್ವಕ್ಕೆ ಗಂಗಣ್ಣ, ಪಶ್ಚಿಮಕ್ಕೆ ಗಂಗಮ್ಮ, ಉತ್ತರಕ್ಕೆ ತಣಿಗೆಬೈಲು ರಸ್ತೆ, ದಕ್ಷಿಣಕ್ಕೆ ಬೈರೇಗೌಡರ ತೋಟ. ದಾವ ಸ್ವತ್ತನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿ ದಾವ ಸ್ವತ್ತನ್ನು ಗುರುತಿಸಿರುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ನಮ್ಮ ಊರಿನವರು ಕೆಲಸ ಮಾಡುತ್ತಿದ್ದಾರೆ. ನಿಡಿ-1 ರಲ್ಲಿ ಪ್ರತಿವಾದಿಗಳು ಕೆಲಸ ಮಾಡುತ್ತಿದ್ದಾರೆಂದರೆ ಸಾಕ್ಷಿ ಇಲ್ಲ ನಾನೇ ಕೂಲಿ ಕೆಲಸದವರ ಹತ್ತಿರ ಕೆಲಸ ಮಾಡಿಸುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಎಸಿ ನ್ಯಾಯಾಲಯದಲ್ಲಿ ದಾವ ಸ್ವತ್ತಿನ ಸ್ಥಳ ತನಿಖೆಗೆ ಆದೇಶ ಮಾಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವ ಸ್ವತ್ತನ್ನು ಸ್ಥಳ ತನಿಖೆ ಮಾಡಿ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಪ್ರತಿವಾದಿಗಳು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆಂದು ವರದಿ ನೀಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ.

ಸದರಿ ಸಮಯದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ, ಸಾಕ್ಷಿದಾರರ ಸಹಿಯನ್ನು ಪಡೆದು ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆಂದು ತಿಳಿಸಿರುತ್ತಾರೆಂದರೆ ಸಾಕ್ಷಿ ಇಲ್ಲ ನಾನೇ ಸ್ವಾಧೀನದಲ್ಲಿರುತ್ತೇನೆಂದು ನುಡಿದಿರುತ್ತಾರೆ. ದಾವ ಸ್ವತ್ತಿನ ವಿಚಾರವಾಗಿ ನಿಮಗೂ ಹಾಗೂ ಪ್ರತಿವಾದಿಗಳಿಗೂ ಜಗಳ ಆಗುತ್ತಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನೀವು ಪ್ರತಿವಾದಿಗಳ ಮೇಲೆ ಲಿಂಗದಹಳ್ಳಿ ಪೊಲೀಸ್ ಠಾಣೆ ಮೇಲೆ ಪಿರ್ಯಾದು ನೀಡಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ನಿಪಿ-12 ಪಿರ್ಯಾದಿಯಲ್ಲಿ ನೀವು ಪ್ರತಿವಾದಿಗಳು ಉಳುಮೆ ಮಾಡುತ್ತಿದ್ದಾರೆಂದು ತಿಳಿಸಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಪತಿ ಕೃಷ್ಣಪ್ಪ ಎಂಬುವವರಿಗೆ ಸದರಿ ದಾವ ಸ್ವತ್ತನ್ನು ಜಿಪಿಎ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಜಿಪಿಎ ಪಡೆದ ಕೃಷ್ಣಪ್ಪನವರು ದಾವ ಸ್ವತ್ತನ್ನು ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ನಾನು ಕೃಷ್ಣಪ್ಪನನ್ನು ನೋಡೇ ಇಲ್ಲ ಎಂದು

ನುಡಿದಿರುತ್ತಾರೆ. ಸದರಿ ವಿಚಾರವನ್ನು ನೀವು ಲಿಂಗದಹಳ್ಳಿ ಪೊಲೀಸ್ ಠಾಣೆಯ ಹತ್ತಿರ ಹೇಳಿಕೆ ನೀಡಿರುತ್ತಿರಾ ಎಂದರೆ ಸಾಕ್ಷಿ ಪ್ರತಿವಾದಿಗಳು ನನಗೆ ಬೆದರಿಕೆ ಹಾಕಿದ ವಿಚಾರವಾಗಿ ದೂರನ್ನು ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ನೀವು ಪೊಲೀಸ್ ಠಾಣೆಯಲ್ಲಿ ಪ್ರತಿವಾದಿಯಾದ ಸತ್ಯಪ್ಪ ಉಳುಮೆ ಮಾಡುತ್ತಿದ್ದಾರೆಂದು ಹೇಳಿಕೆ ನೀಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ದಾವ ಸ್ವತ್ತಿನಲ್ಲಿ ಚೆಂಡು ಹೊವು, ಆಲೂಗೆಡ್ಡೆ, ಬಿನ್ಸ್ ಕಾಳು  ಹಾಕಿರುತ್ತೇನೆ. ಹಿಂದಿನ ವರ್ಷ ನಾನು ಚೆಂಡು ಹೊವನ್ನು ನಾನು ದಾವ ಸ್ವತ್ತಿನಲ್ಲಿ ಹಾಕಿರುತ್ತೇನೆ. ನೀವು ದಾವ ಸ್ವತ್ತಿನಲ್ಲಿ ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಪ್ರತಿವಾದಿಗಳೇ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ಸುಳ್ಳು ನಾನೇ ಸ್ವಾಧೀನದಲ್ಲಿರುತ್ತೇನೆಂದು ನುಡಿದಿರುತ್ತಾರೆ. ನೀವು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹೂಡಿರುತ್ತಿರಾ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ದಾವ ಸ್ವತ್ತಿನಲ್ಲಿ ಓಡಾಡುವ ಸಮಯದಲ್ಲಿ ಬೆದರಿಕೆ ಹಾಕಿದ ವಿಚಾರವಾಗಿ ನಾನು ಸದರಿ ದಾವೆ ಹೂಡಿರುತ್ತೇನೆ. ಪ್ರತಿವಾದಿಗಳು ನನಗೆ ಯಾವ ದಿನದಂದು ತೊಂದರೆ ನೀಡಿದರು ಎಂದು ನನಗೆ ಹೇಳಲು ಬರುವುದಿಲ್ಲ.

ಸದರಿ ದಾವ ಹೂಡುವುದಕ್ಕಿಂತ ಮುಂಚೆ ನನಗೆ ತೊಂದರೆ ಕೊಟ್ಟಿದ್ದರಿಂದ ಈ ದಾವೆ ಹೂಡಿರುತ್ತೇನೆ.  ನೀವು ಯಾವ ಪರಿಹಾರ ಕೋರಿ ಸದರಿ ದಾವೆ ಹೂಡಿರುತ್ತಿರಾ ಎಂದರೆ ಸಾಕ್ಷಿ ಪ್ರತಿವಾದಿಗಳು ನನಗೆ ಹೊಡೆಯುತ್ತೇವೆ ಎಂದು ಬೆದರಿಕೆ ಹಾಕಿದ ಕಾರಣದಿಂದ ನಾನು ಸದರಿ ದಾವೆ ಹೂಡಿರುತ್ತೇನೆಂದು ನುಡಿದಿರುತ್ತಾರೆ. ಸದರಿ ದಾವ ಸ್ವತ್ತು ಹೊರತು ನನಗೆ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. ನಿಮ್ಮ ಪತಿಯು ಮೂಲತಃ ತಮಿಳುನಾಡಿನವರು ಆಗಿರುತ್ತಾರೆಂದರೆ ಸರಿಯಲ್ಲ. ನಿಮ್ಮ ಯಜಮಾನರು ಜಿಪಿಎ ಮುಖಾಂತರ ದಾವ ಸ್ವತ್ತನ್ನು ಹಸ್ತಾಂತರ ಮಾಡಿರುವ ಕಾರಣ ನಿಮಗೆ ದಾವ ಸ್ವತ್ತಿನಲ್ಲಿ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಓ.ಎಸ್.ನಂ.296/2019

ಪಿ.ಡಬ್ಲ್ಯೂ- **1**

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**